ಶ್ರೀ ಕೆ. ಎಂ. ನಾಗಣ್ಣ.—ಸ್ವಾಮಿ, ಈಗ ತಾವು ನೇಕಾರರಿಗೆ ಕಡಿಮೆ ದರದಲ್ಲಿ ಒದಗಿಸುತ್ತೇವೆ ಎಂದು ಹೇಳಿದಿರಿ, ಅದು ವಾಸ್ತವಾಂಶಕ್ಕೆ ದೂರವಾದುದು ಎಂದು ತಿಳಿದುಕೊಳ್ಳಬೇಕ ಮತ್ತೆ ಈ ಏಜೆಂಟರುಗಳು ಮುಖಾಂತರ ಲಾಭ ಹೆಚ್ಚು ಮಾಡಿಕೊಳ್ಳುತ್ತಾರೆ, ನಿಮ್ಮ ಅಧಿಕಾರಿಗಳ ಅವರ ಜೊತೆ ಸಹಕರಿಸುತ್ತಾರೆ, ಅದರಿಂದ ಸರ್ಕಾರಕ್ಕೆ ಲುಕ್ಸಾನು ಆಗುತ್ತದೆ, ಅದು ಗೊತ್ತಿದೆಯೇ? ನೇಕಾರರಿಗೆ ಕಡಿಮೆ ದರದಲ್ಲಿ ಕೊಟ್ಟಿದೆ ಎನ್ನುವುದಕ್ಕೆ ತಾವು ಏನು ವಾಸ್ತವಾಂಶ ಹೇಳುತ್ತೀರಾ?

ಶ್ರೀ ವಿ. ಎಸ್. ಕೌಜಲಗಿ.—ಈಗ ರೇಷ್ಮೆಯನ್ನು ಕೆಲವು ಏಜೆಂಟರು ಹೆಚ್ಚಿನ ಬೆಲೆಗೆ ಮಾರುತ್ತಾರೆ ಎಂದು ಹೇಳಿದರೆ, ನಮ್ಮ ಫೆಡರೇಷನ್ ಮುಖಾಂತರ ಇದನ್ನು ನೇಕಾರರಿಗೆ ಕಡಿಮೆ ಬೆಲೆಯಲ್ಲಿ ಕೊಡುತ್ತಿದ್ದೇವೆ. ಇದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ಪರಿಶೀಲನೆ ಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ಈ ಉತ್ಪಾದನೆಯು ವೆಚ್ಚ ಹೆಚ್ಚಾಗಿರುವುದರಿಂದ, ಮತ್ತೆ, ಉತ್ಪಾದನೆ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ರೇಷ್ಮೆಯನ್ನು ಮಾರಾಟ ಮಾಡಿರುವುದರಿಂದ, ಮತ್ತೆ, ರೇಷ್ಮೆ ಮಾರುಕಟ್ಟೆಯಲ್ಲಿ ಆಗಾಗ್ಗೆ ಬೆಲೆಗಳು ಏರಿಳಿತವಾಗಿರುವುದರಿಂದ ನಷ್ಟವಾಗಿದೆ ಎಂದು ಹೇಳಿದ್ದೀರಿ. ಈ ದರವನ್ನು ಯಾರು ನಿಗದಿ ಮಾಡುತ್ತಾರೆ ಎಂಬುದನ್ನು ಹೇಳುತ್ತೀರಾ?

ಶ್ರೀ ವಿ. ಎಸ್. ಕೌಜಲಗಿ.—ಈಗ ಕಡಿಮೆ ಬೆಲೆ ಎಂದು ಹೇಳಿದರೆ, ಹೋದ ವರ್ಷ 65 ಸಾವಿರ ಕೆ.ಜಿ. ಸಿಲ್ಕ್ ನಮ್ಮಲ್ಲಿ ಸ್ಟಾಕ್ ಉಳಿದಿತ್ತು ಆದರಿಂದ ಜನರಿಗೆ ಉಪಯೋಗವಾಗುವ ರೀತಿಯಲ್ಲಿ ಕೊಡಬೇಕು ಎಂದು ಮಾರಾಟವಾಗಿದೆ. ಹಾಗೆ ಉಳಿದರೆ ಆದರಿಂದ ನಮಗೆ ಪ್ರಯೋಜನ ಇಲ್ಲ, ಆದರಿಂದ ಬಡ್ತಿ ದರ ಹೆಚ್ಚಾಗುತ್ತದೆ ಎಂದು ಮಾರಾಟ ಮಾಡಿದ್ದು. ಈ ಡೈರೆಕ್ಟರ್ ಆಫ್ ಸಿಲ್ಕ್ ಇಂಡಸ್ಟ್ರೀಸ್ ಅವರು ರೇಟ್ ನಿಗದಿ ಮಾಡುತ್ತಾರೆ.

ಶ್ರೀ ಸಿ. ಬೈರೇಗೌಡ.—ಈಗ ಖಾನಗಿ ರೇಷ್ಮೆ, ಸಹಕಾರಿ ರಂಗದಲ್ಲಿ ನಷ್ಟವಾಗುತ್ತದೆ, ಆದ್ದರಿಂದ, ಈ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮಾಡುತ್ತೇವೆ ಎನ್ನುವುದನ್ನು ಇಲ್ಲಿ ಕೊಟ್ಟಿಲ್ಲ ಅದನ್ನು ಕೈ ಬಿಟ್ಟಿದ್ದೀರಾ?

ಶ್ರೀ ವಿ. ಎಸ್. ಕೌಜಲಗಿ.—ಈ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮಾಡುವುದನ್ನು ಕೈ ಬಿಟ್ಟಿಲ್ಲ, ಅದಕ್ಕೆ ಬಂಡವಾಳ ಬಾಕಿ ಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು 24 ಅಂಶದ ಕಾರ್ಯಕ್ರಮ ಹಾಕಿಕೊಂಡು ಜಾರಿಗೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ, ಅವು ಯಾವುವು ಎಂಬುದನ್ನು ತಿಳಿಸುತ್ತೀರಾ?

SRI V. S. KOUJALGI.—It is a long list If the hon'ble Member desires to have it, it will be given.

ಶ್ರೀ ಎಂ. ಸಿದ್ದ ಮಾದಯ್ಯ.—ಸ್ವಾಮಿ, ನನ್ನ ಕ್ಷೇತ್ರದಲ್ಲಿ ಮೂರು ದೊಡ್ಡ ಫಿಲೇಚರ್‌ಗಳು ಇವೆ. ಈಗ ಈ ರೇಟನ್ನು ನಿಗದಿ ಮಾಡುವಾಗ ಡೈರೆಕ್ಟರ್ ನಿಗದಿ ಮಾಡುತ್ತಾರೆ ಎಂದು ಹೇಳುತ್ತೀರಿ, ಆದರ ಬದಲು ಈ ಒಂದು ರೇಟ್ ನಿಗದಿ ಮಾಡಬೇಕಾದರೆ ವಿಧಾನಸಭೆಯ ಸದಸ್ಯರನ್ನು ನೇಮಿಸಿ ಅವರ ಮುಖಾಂತರ ರೇಟ್ ನಿಗದಿ ಮಾಡುವಂಥಾದ್ದನ್ನು ಮಾಡಿದರೆ ಒಳ್ಳೆಯದು ಎಂದು ಕಾಣುತ್ತದೆ ದಯವಿಟ್ಟು ಅದನ್ನು ಮಾಡುತ್ತೀರಾ?

ಶ್ರೀ ವಿ. ಎಸ್. ಕೌಜಲಗಿ.—ನಿಮ್ಮ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

Non-issue of Tickets by Conductor of Bus going from Ranebennur to Medleri

819 SRI B. G. BANAKAR (Hirekerur).—Will the Minister for Transport and Tourism be pleased to state:—

(a) total number of passengers loaded in Haveri KSRTC Depot bus going from Ranebennur to Medleri village on 9th March 1976;

(*b*) whether it is not a fact that about 18 to 24 passengers had paid the charges and the conductor of that bus had not issued tickets to them;

(*c*) whether any Officer has checked this and made any report ;

(*d*) the total number of Checking Officers in Hubli Division and the total number of cases detected by each during the last two months–January and February 1976 ;

(*e*) the action Government intend to take to check the non-issue of tickets to passengers by the conductors ?

SRI M. MOHAMMED ALI (Minister for Transport and Tourism).—

(*a*) 15.

(*b*) The irregularities committed by the conductor were as under :—

(a) He had not issued tickets to 13 passengers despite collection of fare.

(b) He had issued 3 tickets of Rs. 1.05 denomination to 3 passengers which were traced out as once issued tickets.

(c) He had issued two un-punched tickets of Rs. 1.05 denomination to two passengers which were issued on sighting the Inspector.

(*c*) Yes.

(*d*) The Hubli Division had 8 and 7 Inspectors attached to Line Checking Squad during January and February 1976 respectively.

The average number of cases detected per Inspector is as below:–

(i) January 1976 ... 11.1 cases

(ii) February 1976 ... 8.7 cases

(*e*) —

(1) Two-tier checking system has been introduced, with that, Central Line Checking Regional Squad has been stationed at Hubli for the purpose of conducting intensive surprise as also preventive checking in the area.

(2) Ticketless travel and also non-issue of tickets has been made a cognizable offence under the Motor Vehicles Rules.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ, ಹುಬ್ಬಳ್ಳಿಯಲ್ಲಿ ಕೇಂದ್ರೀಯ ಮಾರ್ಗದ ತನಿಖಾ ಪ್ರಾದೇಶಿಕ ತಂಡವನ್ನು ಸ್ಥಾಪಿಸಲಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ ಇದನ್ನು ಸ್ಥಾಪನೆ ಮಾಡಿದ ಮೇಲೆ ಇವರು ಎಷ್ಟು ಜನ ಕಂಡಕ್ಟ್‌ರಂಗಳನ್ನು ಹಿಡಿದಿದ್ದಾರೆ. ಎಷ್ಟು ಜನ ಕಂಡಕ್ಟ್‌ರಂಗಳನ್ನು ಡಿಸ್‌ಮಿಸ್ ಮಾಡಿದ್ದಾರೆ ಎಂಬುದನ್ನು ತಿಳಿಸುತ್ತೀರಾ ?

† SRI M. MOHAMMED ALI.—There are 17 checking offiicers attached to the Line Checking Squad in the Hubli Division. The average number of cases detected per checking officer is given in the answer.

ಶ್ರೀ ಬಿ. ಜಿ ಬಣಕಾರ್.—ಇದರಲ್ಲಿ ಕೆಲವು ಅಧಿಕಾರಿಗಳು ಹೋಗಿ ಕಂಡಕ್ಟರುಗಳನ್ನು ಹಿಡಿದ ಮೇಲೆ, ಅವರು ಹುಬ್ಬಳ್ಳಿಗೆ ಹೋಗಿ ದುಡ್ಡು ಕೊಟ್ಟು ಬಂದ ಮೇಲೆ ಆ ಅಧಿಕಾರಿಗಳು ಮತ್ತೆ ಅವರನ್ನು ಹಿಡಿಯುತ್ತಾ ಇಲ್ಲ ಇದರಲ್ಲಿ ಕೆಲವರು ಒಳ್ಳೆಯ ಕೆಲಸ ಮಾಡುವ ಇನ್‌ಸ್ಪೆಕ್ಟರ್ಸ್ ಸಹ ಇದ್ದಾರೆ, ಕೆಲವರು ಒಳ್ಳೆಯ ಕೆಲಸ ಮಾಡುತ್ತಾ ಇಲ್ಲ. ಆದುದರಿಂದ ಇದನ್ನು ಕಂಡುಹಿಡಿದು ಅಂಥವರ ಮೇಲೆ ಸರಿಯಾದ ಕ್ರಮ ತೆಗೆದುಕೆ ಳ್ಳುವ ಹಾಗೆ ಏರ್ಪಾಡು ಮಾಡುತ್ತೀರಾ ಮತ್ತು ಯಾರು ಹೆಚ್ಚು ಕಂಡಕ್ಟರು ಗಳನ್ನು ಹಿಡಿಯುತ್ತಾರೆ ಅಂಥವರಿಗೆ ಏನಾದರೂ ಒಂದು ಉತ್ತೇಜನ ಕೊಡುತ್ತೀರಾ ಹೇಗೆ ?

SRI M. MOHAMMED ALI.—There are some complaints in Hubli Division that some of the officials are ignoring the conductors who involve in pilferage. But no specific complaint has been received. Therefore, no action was possible. Now the whole thing has got to be examined again.

ಶ್ರೀ ಬಿ. ಬೈರಪ್ಪಾಜಿ.—ಈ ತನಿಖೆಯಂನ್ನು ಮಾಡುವುದರಲ್ಲಿ ಎಷ್ಟೋ ವರ್ಷದಿಂದ ನಾವು ನೋಡುತ್ತಾ ಇದ್ದೇವೆ. ಆಸಿಸೆಂಟ್ ಟ್ರಾಫಿಕ್ ಇನ್‌ಸ್ಪೆಕ್ಟರೋ ಅಥವಾ ಇನೆಸ್ಪೆಕ್ಟರೋ ಯಾರೋ ಒಬ್ಬರು ಇದನ್ನು ಚೆಕ್ ಮಾಡುತ್ತಿದ್ದಾರೆ. ನಾವು ಎಷ್ಟೋ ಸಾರಿ ಬಸ್‌ನಲ್ಲಿ ಓಡಾಡುತ್ತಾ ಇದ್ದೇವೆ. ಒಬ್ಬ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಲಿ ಜನರಲ್ ಮ್ಯಾನೇಜರ್ ಆಗಲಿ ಅಥವಾ ವೈಸ್‌ಛೇರ್ಮನ್ ಆಗಲಿ ಯಾರೂ ಕೂಡ ರಸ್ತೆ ಮೇಲೆ ಬಂದು ಚೆಕ್ ಮಾಡಿದ ದಿಪಸ ನಾವು ಎಂದೂ ಕಾಣಲಿಲ್ಲ. ಇದರಿಂದ ಹೆಚ್ಚು ಫಿಲ್ಪರೇಜ್‌ಗೆ ಅವಕಾಶವಾಗಿದೆ ಎಂದು ನನ್ನ ಅಭಿಪ್ರಾಯ. ಆ ಅಧಿಕಾರಿಗಳು ಅವರವರ ಕೆಲಸವನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಅವರವರ ಜವಾಬ್ದಾರಿ ಅರಿತು ಈ ಕೆಲಸ ಮಾಡದೇ ಇರುವುದ ರಿಂದ ಈ ರೀತಿಯಾಗಿದೆ ಅನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಇದರ ಬಗ್ಗೆ ಆಗಾಗ್ಗೆ ತನಿಖೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

SRI M. MOHAMMED ALI.—There are 5000 buses and thousands of routes. It will not be possible for the General Manager or the Vice Chairman to check all the vehicles. But, of late the Vice Chairman has checked a few buses and also the C. T. M. and other officers have started checking. I am in agreement with the suggestion that as and when possible all high placed officers should check these buses.

ಶ್ರೀ ಬಿ. ಜಿ. ಬಣಕಾರ್.—ಅನೇಕ ಕಡೆಗಳಲ್ಲಿ ಹೆಚ್ಚಿನ ಪ್ರಯಾಣಿಕರು ಇರುವುದರಿಂದ ಸಾಮಾನ್ಯ ವಾಗಿ ಪ್ರತಿಯೊಂದು ಬಸ್ಸಿನಲ್ಲೂ ೨೦-೨೫-೩೦ ಜನರನ್ನು ತುಂಬಿಕೊಂಡು ಓವರ್‌ಲೋಡ್ ಹಾಕಿ ಕೊಂಡು ಬಸ್ಸನ್ನು ಓಡಿಸುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ಒಂದು ಸರ್ವೆ ಮಾಡಿಸಿ ಎಲ್ಲೆಲ್ಲಿ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆ ಎಂದು ಕಂಡು ಬರುತ್ತದೋ ಅಂಥ ಕಡೆಗಳಲ್ಲಿ ಹೆಚ್ಚು ಬಸು ಗಳನ್ನು ಓಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

SRI M. MOHAMMED ALI.—There is overcrowding and now so much traffic is generated that every bus is loaded on all routes. Where there is heavy traffic direction will be issued to the Road Transport Corporation to make a survey and introduce more buses.